ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.02 | Issue. 62 | Pages. 2 | Date: 04-02-2026, WEDNESDAY RNI NO: KARKAN/2024/89601 Kannada Daily
ಸಂಪುಟ : 02 - ಸಂಚಿಕೆ : 62 - ಪುಟಗಳು : 2 04-02-2026 ಬುಧವಾರ Ph: 8762954248 ದರ : ₹1

# ಬೇಲೂರು ಅಭಿವೃದ್ಧಿಗೆ ಜನರಿಂದ ಹಲವು ಸಲಹೆ

## ಪುರಸಭೆ ಬಜೆಟ್ ಪೂರ್ವಭಾವಿ ಸಭೆ | ಪಾರದರ್ಶಕ ಆಡಳಿತ ಭರವಸೆ ನೀಡಿದ ಶಾಸಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪುರಸಭೆ ವತಿಯಿಂದ 2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆ ಮಂಗಳವಾರ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಹಲವರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು.

ಶಾಸಕ ಎಚ್.ಕೆ.ಸುರೇಶ್ ಮಾತನಾಡಿ, ಪಟ್ಟಣ ಅಭಿವೃದ್ಧಿಗೆ 23 ವಾರ್ಡ್‌ಗಳ ಸದಸ್ಯರ ಸಂಪೂರ್ಣ ಬೆಂಬಲವಿದ್ದರೆ ಮಾತ್ರ ಪಟ್ಟಣ ಅಭಿವೃದ್ಧಿಯಾಗುತ್ತದೆ. ಬಿಕ್ಕೋಡು ರಸ್ತೆಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯಲ್ಲಿ ಎರಡು ಬದಿಯಲ್ಲಿ 28 ಅಡಿಗಳಿಗೆ ಒಂದು ಇಂಚು ಕಡಿಮೆ ಇದ್ದರೂ ಪುನಃ ಕಿತ್ತು ಹೊಸದಾಗಿ ನಿರ್ಮಾಣ ಮಾಡಿಸುತ್ತೇನೆ. ಸ್ಥಳದಲ್ಲಿದ್ದ ಲೋಕೋಪಯೋಗಿ ಸಹಾಯಕ ಇಂಜಿನಿಯರ್‌ಗೆ ಸೂಚನೆ ನೀಡಿ ಸ್ಥಳದಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಸಮಸ್ಯೆ ಬಗೆಹರಿಸಬೇಕು ಎಂದು ತಾಕೀತು ಮಾಡಿದರು.



> ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸಂಘ ಸಂಸ್ಥೆಯ ಮುಖಂಡರು ಮತ್ತು ಸಾರ್ವಜನಿಕರು ನೀಡಿದ ಸಲಹೆ ಮೇರೆಗೆ ಪುರಸಭೆಗೆ ಬರುವ ಅನುದಾನ ನೋಡಿಕೊಂಡು 23 ವಾರ್ಡ್‌ಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು.
>
> **- ಉಷಾ ಸತೀಶ್, ಪುರಸಭೆ ಅಧ್ಯಕ್ಷೆ**

ಪಟ್ಟಣದ ಅಭಿವೃದ್ಧಿ ದೃಷ್ಟಿಯಲ್ಲಿ ನಾನು ಯಾವುದೇ ತಾರತಮ್ಯ ಮಾಡಿಲ್ಲ. ಎಲ್ಲ ಸದಸ್ಯರ ಅನುಮತಿಯಂತೆ 7.5 ಕೋಟಿ ರೂ. ಅನುದಾನದ ಕ್ರಿಯಾ ಯೋಜನೆ ರೂಪಿಸಲಾಗಿದೆ.

ಅದರಲ್ಲಿ ಯಾವುದೇ ರಾಜಕೀಯ ಬೇಡ. ಮುಂದೆ 23 ಸದಸ್ಯರ ಜೊತೆ ನಾನೂ ಒಬ್ಬ ಎಂದು ಭಾವಿಸಿ ಎಲ್ಲಾ ವಾರ್ಡ್ ಸಮಸ್ಯೆ ತಿಳಿದು ಅಭಿವೃದ್ಧಿಪಡಿಸೋಣ ಎಂದರು.

### ಕ್ರಿಯಾ ಯೋಜನೆಯಲ್ಲಿ ಲೋಪ

ಮಾಜಿ ಸದಸ್ಯ ಜಿ.ಶಾಂತಕುಮಾರ್ ಮಾತನಾಡಿ, 2018-19ನೇ ಸಾಲಿನಲ್ಲಿ ಪುರಸಭೆಗೆ ಬಂದ 7.5 ಕೋಟಿ ಎಸ್‌ಎಫ್‌ಸಿ ವಿಶೇಷ ಅನುದಾನ ವಾಪಸ್ ಹೋಗಿತ್ತು. ಇದರಿಂದ ಕೆಲ ಕಾಮಗಾರಿ ಅರ್ಧಕ್ಕೆ ನಿಂತಿದ್ದವು. ಹಾಲಿ ಶಾಸಕರು ಪುನಃ 7.5 ಕೋಟಿ ಅನುದಾನ ತಂದರು. ಆದರೆ ಕ್ರಿಯಾಯೋಜನೆ ರೂಪಿಸುವಾಗ, ಪ್ರತಿ ವಾರ್ಡ್ ಸಮಸ್ಯೆ ಆಲಿಸಿ ಮರು ಕ್ರಿಯಾ ಯೋಜನೆ ತಯಾರಿಸಬೇಕಾಗಿತ್ತು. ಹಾಗೆ ಮಾಡದೆ ಕೇವಲ ಮೂರ್ನಾಲ್ಕು ವಾರ್ಡ್‌ಗಳಲ್ಲಿ ಚೆನ್ನಾಗಿರುವ ರಸ್ತೆ-ಚರಂಡಿಗಳನ್ನೇ ಅಗೆದು ಪುನಃ ನಿರ್ಮಾಣ ಮಾಡಲಾಗುತ್ತಿದೆ. ಹೀಗಾದರೆ ಅರ್ಧಕ್ಕೆ ನಿಂತ ಕಾಮಗಾರಿ ಗತಿ ಏನು ಎಂದು ಪ್ರಶ್ನಿಸಿದರು.

ಮತ್ತೊಬ್ಬ ಸದಸ್ಯ ಬಿ.ಗಿರೀಶ್ ಮಾತನಾಡಿ, ಪುರಸಭೆಗೆ ವಾರ್ಷಿಕವಾಗಿ 2.5 ಕೋಟಿ ನಿರಂತರ ಆದಾಯವಿದ್ದು, ನಗರೋತ್ಥಾನದಿಂದ 7.5 ಕೋಟಿ, 15ನೇ ಹಣಕಾಸು 5 ಕೋಟಿ

ಎಸ್‌ಎಫ್‌ಸಿ ಯೋಜನೆ ಅಡಿ 7.5 ಕೋಟಿ ಬರುವ ಹಣದಲ್ಲಿ ಪುರಸಭೆ ವ್ಯಾಪ್ತಿಯ ಅಭಿವೃದ್ಧಿಗೆ ಮಾಡೋಣ ಎಂದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ ಶಿವರಾಜ್ ಮಾತನಾಡಿ, ವರ್ಷಕ್ಕೊಮ್ಮೆ ಪಟ್ಟಣದ ಅಭಿವೃದ್ಧಿಗೆ ಸಾರ್ವಜನಿಕರ ಬಳಿ ಬಜೆಟ್ ಮಂಡನೆಗೂ ಮುನ್ನ ಅವರ ಅಭಿಪ್ರಾಯ ಆಲಿಸಲಾಗುತ್ತದೆ. ಆದರೆ, ಸಾರ್ವಜನಿಕರ ಅಭಿಪ್ರಾಯಕ್ಕಿಂತ ಸದಸ್ಯರ ಅಭಿಪ್ರಾಯ ಹಾಗೂ ಅವರ ಕಾಮಗಾರಿಗಳ ಬಗ್ಗೆ ಚರ್ಚೆ ನಡೆಸುವುದಾದರೆ ಇಂತಹ ಪೂರ್ವಭಾವಿ ಸಭೆ ಏಕೆ ಆಯೋಜಿಸುತ್ತೀರಾ, ನಿಮ್ಮ ಚರ್ಚೆಗಳನ್ನು ಸಾಮಾನ್ಯ ಸಭೆಯಲ್ಲಿ ಮಾಡಿಕೊಳ್ಳಿ ಎಂದು ಮನವಿ ಮಾಡಿದರು.

ಅರ್ಬನ್ ಬ್ಯಾಂಕ್ ಅಧ್ಯಕ್ಷ ಪೈಂಟ್ ರವಿ ಮಾತನಾಡಿ, ಪಟ್ಟಣದ ಅಭಿವೃದ್ಧಿ ದೃಷ್ಟಿಯಲ್ಲಿ ಪುರಸಭೆಯಲ್ಲಿ ಯಾವುದೇ ರಾಜಕೀಯ ತರಬಾರದು. ಅಭಿವೃದ್ಧಿಗೆ 23 ಸದಸ್ಯರು ಮತ್ತು ಶಾಸಕರು ಗಮನ ಹರಿಸಬೇಕೆಂದರು. ಸದಸ್ಯ ಜಮಾಲ್, ಕರವೇ ಅಧ್ಯಕ್ಷ ಬೋಜೇಗೌಡ ಮಾತನಾಡಿದರು. ಮುಖ್ಯಾಧಿಕಾರಿ ಬಸವರಾಜ್ ಶಿಗ್ಗಾವಿ, ಸಾರ್ವಜನಿಕರಿದ್ದರು.

# ವಿದ್ಯಾರ್ಥಿಗಳಲ್ಲಿ ಶ್ರದ್ಧೆ, ಏಕಾಗ್ರತೆ ಮುಖ್ಯ: ಜಿಲ್ಲಾಧಿಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳಲ್ಲಿ ಶ್ರದ್ಧೆ, ಏಕಾಗ್ರತೆ ಮತ್ತು ಆಸಕ್ತಿ ಮುಖ್ಯವಾಗಿದ್ದು, ಶ್ರಮಪಟ್ಟು ಓದಿದರೆ ಯಶಸ್ಸು ಕಾಣಬಹುದು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಸಮಾಜ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ/ವರ್ಗದ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಕುರಿತು ಒಂದು ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬರ ಜೀವನದಲ್ಲಿಯೂ ಸಾಧನೆ ಎಂಬುದು ಕಷ್ಟಕರದ ದಾರಿಯಾಗಿರುತ್ತದೆ. ಶ್ರಮ ಮತ್ತು ಶ್ರದ್ಧೆ ಸಾಧನೆಯ ಭಾಗವಾಗಿದೆ. ಪದವಿ ಪಡೆಯುವ ಮುನ್ನವೇ ನಾವು ಮುಂದೆ ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಪ್ರತಿಯೊಬ್ಬರೂ ಯೋಚಿಸಿರಬೇಕು ಎಂದರು.

ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸುವ ವಿದ್ಯಾರ್ಥಿಗಳು ಮಾನಸಿಕವಾಗಿ ಪರೀಕ್ಷೆ ಎದುರಿಸಲು ಸಿದ್ಧವಾಗಿರಬೇಕು ಶ್ರಮ ಪಟ್ಟು ಅಧ್ಯಯನ ನಡೆಸಬೇಕು. ಆಗ ಮಾತ್ರ ಉದ್ಯೋಗ ಪಡೆಯಬಹುದು ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ಮುನ್ನ ವೇಳಾಪಟ್ಟಿ ರಚಿಸಿಕೊಳ್ಳಬೇಕು. ನಂತರ ಯಾವ ಹುದ್ದೆಗೆ ನಾವು ತಯಾರಿ ಮಾಡಿಕೊಳ್ಳಬೇಕು ಎಂಬ ನಿರ್ಧಾರ ಮಾಡಬೇಕು. ಸಮಯ ನಿರ್ವಹಣೆ ಮಾಡಿಕೊಂಡು



ಪರೀಕ್ಷೆಗೆ ಸಿದ್ಧತೆ ಮಾಡಬೇಕು. ಜೀವನದಲ್ಲಿ ಶಿಸ್ತು ಮುಖ್ಯವಾಗಿರುತ್ತದೆ. ಶಿಸ್ತು ಶ್ರದ್ಧೆಯಿಂದ ಗುರಿ ಸಾಧಿಸಬಹುದು ಎಂದರು.

ತರಬೇತಿ ಸಂಸ್ಥೆಗಳಿಗೆ ಶುಲ್ಕ ಪಾವತಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಕಾರ್ಯಾಗಾರ ಆಯೋಜಿಸಿದ್ದಾರೆ. ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಪಿ.ವಿ.ಬೈರಪ್ಪ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳಿಗೆ ಹಂತಗಳನ್ನು ಸದೀರ್ಘವಾಗಿ ವಿವರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಯೋಜನಾಧಿಕಾರಿ ಮಹೇಶ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಾ.ಎನ್.ಆರ್.ಪುರುಷೋತ್ತಮ, ಪ್ರಭಾರ ಅಪರ ಜಿಲ್ಲಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ್ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿನಡೆಸುವ ಕುರಿತು ಮಾಹಿತಿ ನೀಡಿದರು.

# ನಾನು ಶಾಸಕನಲ್ಲ ಜನರ ಸೇವಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಶಾಸಕನಾಗಿ ಅಧಿಕಾರ ಚಲಾಯಿಸುವುದಕ್ಕಿಂತ ಸಾರ್ವಜನಿಕರ ಸೇವಕನಾಗಿ ಕೆಲಸ ಮಾಡುವುದೇ ಜೀವನದ ತತ್ವ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಬೆಳಗೋಡು ಹೋಬಳಿ ಬಾಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಜೀವಿನಿ ಶೆಡ್, ಹೈಟೆಕ್ ಶೌಚಾಲಯ ಹಾಗೂ ಬಾಗೆ ಪೆಟ್ರೋಲ್ ಬಂಕ್‌ನಿಂದ ಹಳೆ ಬಾಗೆವರೆಗೂ ಅಳವಡಿಸಲಾದ ಬೀದಿ ದೀಪ ಉದ್ಘಾಟಿಸಿ ಅವರು ಮಾತನಾಡಿದರು.

ಜನಸೇವೆಯೇ ನನ್ನ ಮುಖ್ಯ ಗುರಿಯಾಗಿದ್ದು, ಗ್ರಾಮೀಣ ಪ್ರದೇಶದ ಜನರ ಸಮಸ್ಯೆಗಳನ್ನು ಅರಿತು ಅವರ ನೋವಿಗೆ ಸ್ಪಂದಿಸುವುದೇ ನನ್ನ ಮೊದಲ ಆದ್ಯತೆಯಾಗಿದೆ. ಅಧಿಕಾರ ಯಾರಿಗೂ ಶಾಶ್ವತವಲ್ಲ ಎಂಬುದು ರಾಜಕೀಯ ಹಾಗೂ ಜೀವನದ ಸತ್ಯ. ಸಿಕ್ಕಿರುವ ಅಧಿಕಾರವನ್ನು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದೇ ಮುಖ್ಯ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಇಚ್ಛಾಶಕ್ತಿಯಿಂದ ಕಾರ್ಯನಿರ್ವಹಿಸಬೇಕು. ಕೆಲ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಗ್ರಾಮೀಣ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು,

ಕೆಲಸದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಗ್ರಾಮೀಣ ಅಭಿವೃದ್ಧಿಯಲ್ಲಿ ಪಿಡಿಒಗಳ ಪಾತ್ರ ಅತ್ಯಂತ ಮಹತ್ತರವಾಗಿದೆ. ಅವರು ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸುವ ಮೂಲಕ ಸರ್ಕಾರದ ಸವಲತ್ತುಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮಾಡಬೇಕು. ಇದರಿಂದ ತಮ್ಮ ಸೇವೆಯಲ್ಲಿ ಆತ್ಮತೃಪ್ತಿ ದೊರೆಯಲಿದೆ ಎಂದು ಹೇಳಿದರು.

ಕಾಡಾನೆ ಬಾಧಿತ ಪ್ರದೇಶಗಳ ಸಾರ್ವಜನಿಕರ ಹಿತದೃಷ್ಟಿಯಿಂದ ನಿರಂತರ ವಿದ್ಯುತ್ ಸಂಪರ್ಕ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಅದರಂತೆ ರಾಷ್ಟ್ರೀಯ ಹೆದ್ದಾರಿಯಿಂದ ಬಾಗೆ ಗ್ರಾಮದಿಂದ ಹಳೆ ಬಾಗೆ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ನೂತನ ವಿದ್ಯುತ್ ಕಂಬಗಳು ಹಾಗೂ ದೀಪಗಳನ್ನು ಅಳವಡಿಸಿ ನಿರಂತರ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸಂಜೀವಿನಿ ಶೆಡ್‌ಗಳು ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ, ವೃತ್ತಿ ತರಬೇತಿ ಹಾಗೂ ಸ್ವಸಹಾಯ ಗುಂಪುಗಳ ಉತ್ಪನ್ನಗಳ ಮಾರಾಟಕ್ಕೆ ವೇದಿಕೆಯನ್ನು ಕಲ್ಪಿಸುವುದರ ಜೊತೆಗೆ, ವಿವಿಧ ಯೋಜನೆಗಳ ಮೂಲಕ ಸ್ವಾವಲಂಬನೆಗೆ ಸಹಕಾರಿಯಾಗುತ್ತವೆ ಎಂದು ಹೇಳಿದರು.

ನಾನು ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಕೀಯ ಮಾಡುವುದಿಲ್ಲ. ಕ್ಷೇತ್ರವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲು ಪಕ್ಷಾತೀತವಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

# ಚಂದ್ರಮೌಳೇಶ್ವರ ರಥೋತ್ಸವಕ್ಕೆ ಭಕ್ತರ ದಂಡು

## ಪುರಸಭೆ ಸಹಕಾರದಲ್ಲಿ ಅರ್ಥಪೂರ್ಣ ಜಾತ್ರೆ | ಜಿಲ್ಲಾಧಿಕಾರಿ ಲತಾಕುಮಾರಿ ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಆರಾಧ್ಯ ದೈವ ಕೋಟೆ ಶ್ರೀ ಚಂದ್ರಮೌಳೇಶ್ವರ ಬ್ರಹ್ಮರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಮಂಗಳವಾರ ನೆರವೇರಿತು.

ಮುಂಜಾನೆ ಸುಪ್ರಭಾತ ಸೇವೆ ಮೂಲಕ ದೇವಾಲಯದಲ್ಲಿನ ಮೂಲ ವಿಗ್ರಹಕ್ಕೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಶಿವನ ಪಾರಾಯಣ, ಬಿಲ್ವಾರ್ಚನೆ ನಂತರ ವಿವಿಧ ಬಗೆಯ ಪುಷ್ಪಗಳಿಂದ ವಿಶೇಷವಾಗಿ ದೇವರಿಗೆ ಅಲಂಕಾರ ಮಾಡಲಾಯಿತು, ಅಡ್ಡೆಯಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯನ್ನು ಮಂಗಳ ವಾದ್ಯದೊಂದಿಗೆ ಮೆರವಣಿಗೆ ಮೂಲಕ ದೇವಾಲಯವನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿದರು.

ನಂತರ ಉತ್ಸವ ದೇವರನ್ನು ಕೋಟೆ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಕೋಟೆ ಬಡಾವಣೆಯಲ್ಲಿ ಭಕ್ತರು ತಮ್ಮ ಮನೆ ಮುಂಭಾಗ ಶುಚಿಮಾಡಿ ನೀರಿನಿಂದ ಸ್ವಚ್ಛಗೊಳಿಸಿ ರಂಗೋಲಿ ಬಿಟ್ಟು ದೇವರನ್ನು ಬರಮಾಡಿಕೊಂಡರು.



ದೇವರು ತಮ್ಮ ಮನೆ ಬಾಗಿಲಿಗೆ ಆಗಮಿಸಿದಾಗ ಹಣ್ಣುಕಾಯಿ ನೀಡಿ ಪೂಜೆ ಮಾಡಿಸಿದರು. ಇದಾದ ಬಳಿಕ ಉತ್ಸವ ದೇವರು ಚಂದ್ರಮೌಳೇಶ್ವರ ದೇವಾಲಯದ ಸಮೀಪಕ್ಕೆ ಕರೆತಂದು ಅಲಂಕೃತ ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.

ಉತ್ಸವ ದೇವರು ರಥಕ್ಕೆ ಪ್ರತಿಷ್ಠಾಪನೆಯಾದ ಮೇಲೆ ರಥಕ್ಕೆ ಬಲಿ ನೀಡಿ, ಮಂಗಳ ವಾದ್ಯ ದೊಂದಿಗೆ ಪೂಜೆ ನೆರವೇರಿಸಿದ ನಂತರ ರಥದ ಮುಂಭಾಗದಲ್ಲಿನ ಬಾಳೆಕಂಬ ಕಡಿಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಹಾಜರಿದ್ದು ಭಕ್ತರು ರಥಕ್ಕೆ ದವನ ಹಾಗೂ ಬಾಳೆ ಹಣ್ಣು ಎಸೆಯುವ ಮೂಲಕ ಭಕ್ತಿಯಿಂದ ಉತ್ಸವದಲ್ಲಿ ಪಾಲ್ಗೊಂಡರು.

ಪ್ರಧಾನ ಅರ್ಚಕ ಬಾಲಕೃಷ್ಣ ಭಟ್ಟ ಮತ್ತು ಅರ್ಚಕ ವೃಂದ ಧಾರ್ಮಿಕ ವಿಧಿ ವಿಧಾನ ನೇರವೇರಿಸಿ ಮಹಮಂಗಳಾರತಿ ಮಾಡಿದರು. ರಥೋತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡು ರಥ ಎಳೆಯುವ ಮೂಲಕ ದೇವರ ಕೃಪೆಗೆ ಪಾತ್ರರಾದರು.

ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಜಿಲ್ಲೆಗೆ ಚನ್ನರಾಯಪಟ್ಟಣ ದೇವಾಲಯದ ಕಳಸವಿದ್ದಂತೆ. ಸಾಕಷ್ಟು ಧಾರ್ಮಿಕ ಕಾರ್ಯಕ್ರಮಗಳು ನಡೆಯುವುದು ಈ ತಾಲೂಕಿನಲ್ಲಿ ಮಾತ್ರ. ಇದು ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು. ಜಾತ್ರೆ ಹಾಗೂ ಹಬ್ಬ ಸಾರ್ವಜನಿಕರನ್ನು ಒಗ್ಗೂಡಿಸುವುದರೊಂದಿಗೆ ಪಟ್ಟಣ ಹಾಗೂ ಗ್ರಾಮದ ಜನತೆಯ ದ್ವೇಷ ಮರೆತು ಸಂತೋಷಕರ ವಾತಾವರಣ ಸೃಷ್ಟಿಸುವ ಮಹತ್ವ ಹೊಂದಿದೆ. ಅನಿರೀಕ್ಷಿತವಾಗಿ ಈ ರಥೋತ್ಸವದಲ್ಲಿ ಪಾಲ್ಗೊಂಡಿದ್ದೇನೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಕೋಟ ಮೋಹನ್ ಮಾತನಾಡಿ, ಹಲವು ದಶಕಗಳಿಂದ ಪ್ರತಿ ವರ್ಷವೂ ಪುರಸಭೆ ಸಹಕಾರದಲ್ಲಿ ದೇವರ ಮನೆತನದವರ ಸಹಕಾರದಲ್ಲಿ ರಥೋತ್ಸವ ನೆರವೇರಿಸಲಾಗುತ್ತಿದೆ. ಈ ವರ್ಷ ಪುರಸಭೆಯಿಂದ ರಥದ ಮನೆ, ನವಗ್ರಹ ಮಂಟವನ್ನು ನಿರ್ಮಾಣ ಮಾಡಿ ದೇವಾಲಯಕ್ಕೆ ನೀಡಲಾಗಿದೆ ಎಂದರು. ಧಾರ್ಮಿಕ ಕಾರ್ಯಕ್ರಮಗಳು ನಡೆಯುವುದರಿಂದ ಗ್ರಾಮಕ್ಕೆ ಹಾಗೂ ಪಟ್ಟಣಕ್ಕೆ ಶಾಂತಿ ದೊರೆಯುವುದರೊಂದಿಗೆ ಎಲ್ಲರೂ ನೆಮ್ಮದಿಯಿಂದ ಬದುಕಬಹುದಾಗಿದೆ. ಇದನ್ನು ಅರಿತೇ ಪೂರ್ವಿಕರು ಜಾತ್ರೆ, ರಥೋತ್ಸವ, ಧಾರ್ಮಿಕ ಕಾರ್ಯಕ್ರಮಗಳನ್ನು ವರ್ಷಕ್ಕೊಮ್ಮೆ ಮಾಡುವ ಕೆಲಸ ಮಾಡಿದ್ದಾರೆ. ಇದನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾಗಿದೆ ಎಂದು ತಿಳಿಸಿದರು.

ರಥೋತ್ಸವಕ್ಕೆ ಮೊದಲು ವಿವಿಧ ಕೋಲಾಟ ತಂಡದಿಂದ ದೇವಾಲಯದ ಆವರಣದಲ್ಲಿ ಹಾಗೂ ರಥದ ಮುಂಭಾಗ ಕೋಲಾಟ ನಡೆಯಿತು. ದೇವಾಲಯ ಆವರಣದಲ್ಲಿ ಸೋಮನ ಕುಣಿತ ನಡೆಯಿತು. ಸೋಮವಾರ ರಾತ್ರಿ ಭಕ್ತರ ಸಹಕಾರದಲ್ಲಿ ಗಿರಿಜಾ ಕಲ್ಯಾಣೋತ್ಸವವನ್ನು ಮಾಡಲಾಗಿತ್ತು. ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಭಕ್ತರಿಗೆ ತೀರ್ಥ ಪ್ರಸಾದ ವಿತರಣೆ ಮಾಡಿದಲ್ಲದೆ ಅನ್ನದಾನವನ್ನು ಏರ್ಪಡಿಸಲಾಗಿತ್ತು.

ಬ್ರಾಹ್ಮಣ ಯುವ ವೇದಿಕೆ ಪದಾಧಿಕಾರಿಗಳಾದ ಕೃಷ್ಣಪ್ರಸಾದ್, ವೆಂಕಟೇಶ್, ವಿಶ್ವನಾಥ್, ಲಕ್ಷ್ಮೀಶ, ಶಾಮಿರಘು, ಮಂಜು ಹೆಬ್ಬಾರ್, ಯೋಗಾನಂದ, ಶಶಿಧರ್, ರಾಣಿ, ರಾಧಾ, ಕವಿತಾ, ಲಕ್ಷ್ಮೀ, ಭಾಗ್ಯಮ್ಮ, ಸುರೇಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ.ಕೆ.ಕುಸುಮಾರಾಣಿ, ಪುರಸಭೆ ಮುಖ್ಯಾಧಿಕಾರಿ ಯತೀಶ್ ಹಾಗೂ ಪುರಸಭೆ ಸಿಬ್ಬಂದಿ ಉಪಸ್ಥಿತರಿದ್ದರು.

# ಅನುಮಾನಾಸ್ಪದ ಸ್ಥಿತಿಯಲ್ಲಿ ಯುವಕನ ಶವ ಪತ್ತೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ : ಪಟ್ಟಣದ ತೇಜಸ್ವಿ ವೃತ್ತದ ಸಮೀಪದ ಖಾಸಗಿ ಶಾಲೆಯ ಆಟದ ಮೈದಾನದಲ್ಲಿ ಯುವಕನೊಬ್ಬನು ಅನುಮಾನಾಸ್ಪದ ಸ್ಥಿತಿಯಲ್ಲಿ ಮೃತಪಟ್ಟಿರುವ ಘಟನೆ ಮಂಗಳವಾರ ಬೆಳಕಿಗೆ ಬಂದಿದೆ.

ಮೃತ ಯುವಕನನ್ನು ಮಠಸಾಗರ ಗ್ರಾಮದ ಶಿವಣ್ಣ ಎಂಬವರ ಪುತ್ರ ಜೀವನ್ (30) ಎಂದು ಗುರುತಿಸಲಾಗಿದೆ.

ಸ್ಥಳೀಯರು ಆಟದ ಮೈದಾನದಲ್ಲಿ ಜೀವನ್ ಶವ ಬಿದ್ದಿರುವುದನ್ನು ಗಮನಿಸಿ ನಗರ ಪೊಲೀಸರಿಗೆ ಮಾಹಿತಿ ನೀಡಿದರು. ಘಟನಾ ಸ್ಥಳಕ್ಕೆ ಸಕಲೇಶಪುರ ನಗರ ಪೊಲೀಸ್ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದೇ ವೇಳೆ ಸೋಕೋ ತಂಡವೂ ಸ್ಥಳಕ್ಕೆ ಆಗಮಿಸಿ ಮಹಜರು ಕಾರ್ಯಾಚರಣೆ ನಡೆಸಿತು.

ಮೃತ ಯುವಕನ ಬೈಕ್ ಹೇಮಗಂಗಾ ಸರ್ವಿಸ್ ಸ್ಟೇಷನ್ ಬಳಿ ನಿಂತಿರುವುದು ಪತ್ತೆಯಾಗಿದ್ದು, ಈ ಹಿನ್ನೆಲೆಯಲ್ಲಿ ಸಾವಿನ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ. ಸಾವಿಗೆ ಕಾರಣ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಘಟನೆಯು ಸಕಲೇಶಪುರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಾವಿನ ನಿಖರ ಕಾರಣ ಪತ್ತೆಹಚ್ಚಲು ತನಿಖೆ ಮುಂದುವರೆಸಿದ್ದಾರೆ.

# ಹೊರಗುತ್ತಿಗೆ ಕೆಲಸ ನೀಡಿಕೆಯಲ್ಲಿ ಅನ್ಯಾಯ: ಪ್ರತಿಭಟನೆ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿವೃತ್ತಿ ನಂತರವೂ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿಸಿಕೊಳ್ಳುವ ವಿಚಾರದಲ್ಲಿ ಜಿಲ್ಲಾ ಪಂಚಾಯ್ತಿಯಲ್ಲಿ ಅನ್ಯಾಯ ಹಾಗೂ ತಾರತಮ್ಯ ನಡೆಯುತ್ತಿದೆ ಎಂದು ದಲಿತ ಸಂಘಟನ ಸಮಿತಿ ಜಿಲ್ಲಾಧ್ಯಕ್ಷ ಚೇತನ್ ಶಾಂತಿಗ್ರಾಮ ದೂರಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಪಂ ವ್ಯಾಪ್ತಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಒಳಗೆ ಅನಧಿಕೃತವಾಗಿ ಯಾರದೋ ವ್ಯಕ್ತಿ ಅಥವಾ ಮಹಿಳೆ ಹೆಸರಿನಲ್ಲಿ ಬೇರೊಬ್ಬರಿಗೆ ಕೆಲಸ ನೀಡಲಾಗಿದೆ ಎಂದು ಆರೋಪಿಸಿದರು.

ಜಿಪಂ ನಲ್ಲಿಯೇ ವಿವಿಧ ಇಲಾಖೆ ಅಥವಾ ವಿಭಾಗಗಳಲ್ಲಿ ಕೆಲಸ ನಿರ್ವಹಿಸಿ ನಿವೃತ್ತಿ ನಂತರ ಕಮಿಷನ್ ಆಧಾರದ ಮೇಲೆ ಇಲ್ಲಿಯೇ ಕೆಲಸ ಮಾಡಲು ಅವಕಾಶ ನೀಡಲಾಗಿದೆ.

ಆದರೆ ಮಲ್ಲಪ್ಪನಹಳ್ಳಿ ನಿವಾಸಿ ಲಕ್ಕಯ್ಯ ಎಂಬುವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸಿ 58 ವರ್ಷಕ್ಕೇ ನಿವೃತ್ತಿ ಹೊಂದಿದ್ದಾರೆ. ಅವರ ಸೇವೆ




ಬಾಕಿ ಇದ್ದರೂ, ಅವರು ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲ ಎಂದು ಆಪಾದಿಸಿದರು. ಈ ಸಂಬಂಧ ಲಕ್ಕಯ್ಯ ಕಾನೂನು ಹೋರಾಟ ಮಾಡುತ್ತಿದ್ದಾರೆ. ಅವರ ಜೀವನ ನಿರ್ವಹಣೆ ಕಷ್ಟಕರವಾಗಿದ್ದು, ಕೆಲಸ ಮಾಡಲು ಅವಕಾಶ ಮಾಡಿಕೊಡಿ ಎಂದು ಪರಿ ಪರಿಯಾಗಿ ಕೇಳಿದರೂ, ದಲಿತ ಎಂಬ ಕಾರಣಕ್ಕೆ ಅವಕಾಶ ನೀಡುತ್ತಿಲ್ಲ ಎಂದರು.

ಈ ಬಗ್ಗೆ ಕೇಳಿದರೆ ಏಜೆನ್ಸಿ ಮೂಲಕ ಬಂದವರಿಂದ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ ಎಂದು ಸಬೂಬು ಹೇಳುತ್ತಾರೆ. ಆದರೆ ಏಜೆನ್ಸಿಯ ವಿವರವನ್ನೂ ನೀಡುತ್ತಿಲ್ಲ ಎಂದು ದೂರಿದರು. ಈ ಸಂಬಂಧ ಹಿಂದಿನ ಡಿಸಿ ಅವರು, ಸಂಸದರು ಸೂಚಿಸಿದರೂ ಕೆಲಸ ನೀಡದೆ ಸತಾಯಿಸುತ್ತಿದ್ದಾರೆ.

# ಸಮರ್ಪಣ ವತಿಯಿಂದ ಪ್ರಸಾದ ವಿನಿಯೋಗ

ಅರಸೀಕೆರೆ: ನಗರದ ರುದ್ರಾಕ್ಷ ಫೌಂಡೇಶನ್ ಆಶ್ರಯದಲ್ಲಿ ಸಮರ್ಪಣ ವತಿಯಿಂದ ಶ್ರೀ ಭವಾನಿ ಶಂಕರ ದೇವಸ್ಥಾನದಲ್ಲಿ ಪ್ರಸಾದ ವಿನಿಯೋಗ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೈ ಪ್ರಕಾಶ್ ಗುರೂಜಿ ಮಾತನಾಡಿ, ಸಮರ್ಪಣ ವತಿಯಿಂದ ಸೋಮವಾರ ಸಂಜೆ ಪ್ರಸಾದ ವಿನಿಯೋಗ ನಡೆಯುತ್ತದೆ. ಪ್ರಸಾದ ವಿನಿಯೋಗ ಕಾರ್ಯಕ್ರಮದಲ್ಲಿ ಸೇವೆ ಸಲ್ಲಿಸಲು ಹಾಗೂ ಭಗವಂತನ ಪ್ರಸಾದ ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಮಹಾಜನತೆ ಪಾಲ್ಗೊಳ್ಳುವ ಮೂಲಕ ದೇವರಿಗೆ, ಸಮಾಜಕ್ಕೆ ಸಮರ್ಪಣೆ ಮಾಡುವುದರ ಮೂಲಕ ಜೀವನದ ಸಾರ್ಥಕತೆ ತಿಳಿದುಕೊಳ್ಳೋಣ ಎಂದು ತಿಳಿಸಿದರು.

ಉದ್ಘಾಟನೆ ನೆರವೇರಿಸಿದ ತಾಲೂಕು ಆಹಾರ ಶಿರಸ್ತೇದಾರ್ ಬಾಲಚಂದ್ರ ಮಾತನಾಡಿ, ಅನ್ನದಾಸೋಹ ಹಿಂದೂ ಧರ್ಮ ಮತ್ತು ಶರಣ ಸಂಸ್ಕೃತಿಯಲ್ಲಿ ಅತ್ಯುನ್ನತ ದಾನವಾಗಿದೆ. ಹಸಿದವರಿಗೆ ಅನ್ನ ನೀಡಿ ಹಸಿವು ನೀಗಿಸುವುದೇ ಇದರ ಮುಖ್ಯ ಉದ್ದೇಶ ತನು-ಮನ-ಧನ ಸಮರ್ಪಣೆ (ತ್ರಿವಿಧ ದಾಸೋಹ) ಸಂಕೇತವಾಗಿ,



ಜಾತಿ-ಮತ ಭೇದವಿಲ್ಲದೆ ಸರ್ವರಿಗೂ ಸಮಪಾಲು ನೀಡುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಅರಸೀಕೆರೆ ಆರ್ಯವೈಶ್ಯ ಮಹಿಳಾ ಮಂಡಳಿ ಅಧ್ಯಕ್ಷರಾದ ಸುಷ್ಮಾ ವೆಂಕಟೇಶ್, ಸಮಾಜ ಸೇವಕ ರೀನಾ ಬಾಲಾಜಿ,

ಮಾಲೆಕಲ್ಲು ತಿರುಪತಿ ದೇವಸ್ಥಾನದ ಅಧ್ಯಕ್ಷ ನಾಗರಾಜ್, ಸಂಗೊಳ್ಳಿ ರಾಯಣ್ಣ ವೇದಿಕೆ ಅಧ್ಯಕ್ಷ ಹರೀಶ್ ಕುಮಾರ್, ಪತ್ರಕರ್ತರಾದ ಹೇಮಂತ್ ಕುಮಾರ್ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಈರಣ್ಣ, ಆರೋಗ್ಯ ಇಲಾಖೆಯ ಪರಮೇಶ್, ಸಮರ್ಪಣಾ ಸೇವಾ ಸಮಿತಿ ಮಹಿಳಾ ಘಟಕದ ಅಧ್ಯಕ್ಷರಾದ ವನಜಾಕ್ಷಿ ವಿಜಯ್ ಕುಮಾರ್, ಉಪಾಧ್ಯಕ್ಷ ಧನಂಜಯ್ ಸವಿತಾ, ನಿರಂಜನ್, ಸಿದ್ದೇಶ್, ಚೇತನ್ ಜೈನ್, ಸಿಂಧು, ಮನು ಇದ್ದರು.

# ಪುರಾತನ ಸಂಸ್ಕೃತಿ ಭವಿಷ್ಯದ ಪೀಳಿಗೆಗೂ ಉಳಿಯಲಿ

## ಬಿಜಿಎಸ್ ಮಠದಲ್ಲಿ 137ನೇ ಹುಣ್ಣಿಮೆ ಕಾರ್ಯಕ್ರಮ । ಚುಂಚಶ್ರೀ ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಪರಂಪರೆ, ಆಚಾರ-ವಿಚಾರ, ಆಧ್ಯಾತ್ಮಿಕತೆ ಉಳಿಯಬೇಕೆಂದರೆ ನಾವು ಅದನ್ನು ಅಳವಡಿಸಿಕೊಂಡು ಭವಿಷ್ಯದ ಪೀಳಿಗೆಗೂ ತಿಳಿಸಿಕೊಡುವ ಕೆಲಸ ಮಾಡಬೇಕೆಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ 137ನೇ ಗುರು ತೋರಿದ ದಾರಿ ತಿಂಗಳ ಮಾಮನ ತೇರು ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಆಕ್ರಮಣಕಾರರಿಂದ ದೇಶವನ್ನು ರಕ್ಷಿಸಿಕೊಳ್ಳಲು ಚೀನಾ ದೇಶ ಸುತ್ತಲು ಗೋಡೆ ನಿರ್ಮಿಸಿಕೊಂಡಿತು. ಕಾವಲುಗಾರರು ಲಂಚ ಪಡೆದು ಶತ್ರುಗಳನ್ನು ಒಳಗೆ ಬಿಟ್ಟುಕೊಂಡಿದ್ದರಿಂದ ಅದು ದಾಳಿಗೆ ಒಳಗಾಯಿತು. ಅದೇ ಪರಿಸ್ಥಿತಿ ನಮಗೆ ಎದುರಾಗಬಾರದು. ಸಂಸ್ಕೃತಿ ಹಾಳು ಮಾಡುವುದು ಆಕ್ರಮಣಕಾರರ ಉದ್ದೇಶವಾಗಿದೆ. ಪ್ರಸ್ತುತ ಪ್ರಪಂಚ ಝೆನ್ ಝೀ, ಝೆನ್ ಆಲ್ಫಾ ಹಾಗು ಝೆನ್ ಬೀಟಾ ಯುಗದಲ್ಲಿದೆ. ಈಗಿನ ಯುವಕರನ್ನು ಝೆನ್ ಝೀಗೆ ಹೋಲಿಸಿದರೆ ಬಾಲಕರು ಝೆನ್ ಆಲ್ಫಾಗಳಾಗಿದ್ದಾರೆ. ಇನ್ನು ಝೆನ್ ಬೀಟಾಗಳೆಂದರೆ ಈಗ ಹುಟ್ಟಿರುವ ಮಕ್ಕಳು. ಈ ಪೀಳಿಗೆಗೆ ಸಂಸ್ಕಾರ ಕಲಿಸದಿದ್ದರೆ ಇನ್ನೆಂದಿಗೂ ಸುಸಂಸ್ಕೃತ ರಾಷ್ಟ್ರ ನಿರ್ಮಿಸಲು ಸಾಧ್ಯವಿಲ್ಲ. ನಮ್ಮ ಪರಂಪರೆ ಬಗ್ಗೆ ಅವಹೇಳನ ಮಾಡುವ ಕೃತ್ಯಗಳು ಹೆಚ್ಚುತ್ತಿವೆ. ಕೌಟುಂಬಿಕ ಸಾಮರಸ್ಯವನ್ನು ಹದಗೆಡಿಸುವ ಪ್ರಯತ್ನಗಳು ನಡೆಯುತ್ತಿವೆ. ಇಷ್ಟು ವರ್ಷಗಳ ಕಾಲ ನಾವು ಯಾರನ್ನು ಆದರ್ಶ ಪುರುಷರು, ಮಹನೀಯರು ಎಂದು ಹೇಳಿಕೊಂಡಿದ್ದೆವೆಯೋ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಲಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಂದ ಪಾರಾಗುವ ಕೆಲಸ ನಮ್ಮೆಲ್ಲರಿಂದ ಆಗಬೇಕೆಂದು ಸಲಹೆ ನೀಡಿದರು.

ಮೂಕ ಪ್ರಾಣಿಗಳಿಗಿಂತ ಚೆನ್ನಾಗಿ ಕಾಣಿಸುತ್ತಿದ್ದೇವೆಂದ ಮಾತ್ರಕ್ಕೆ ಮನುಷ್ಯ ತನ್ನನ್ನು ನಾಗರಿಕ ಎಂದು



ಕರೆದುಕೊಳ್ಳುತ್ತಿದ್ದಾನೆ. ನಿಜವಾದ ನಾಗರಿಕ ಎಂದರೆ ಪೂರ್ಣತೆ ಸಾಧಿಸುವುದಾಗಿದೆ. ಗುರು ಇಲ್ಲದೆ ಬದುಕು ಹೇಗೋ ನಡೆದು ಹೋಗುತ್ತದೆ. ಆದರೆ, ವಿಕಸಿತ ಮಾರ್ಗದಲ್ಲಿ ಸಾಗಬೇಕೆಂದರೆ ಗುರು ಬೇಕು. ಇಲ್ಲದಿದ್ದರೆ ಸ್ಥಾನ ಪಲ್ಲಟವಾಗಿ ಬದುಕಿನ ಮಾರ್ಗವೇ ಬದಲಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಚಿಂತಿಸಿ ನಾಗರಿಕತೆಯ ಬದುಕನ್ನು ಕಟ್ಟಿಕೊಳ್ಳಬೇಕಿದೆ ಎಂದರು.

ಪ್ರಸಕ್ತ ಪರಿಸ್ಥಿತಿಯಲ್ಲಿ ಹಿಂದುತ್ವ ವಿಚಾರವಾಗಿ ಉಪನ್ಯಾಸ ನೀಡಿದ ಸಾಮಾಜಿಕ ಕಾರ್ಯಕರ್ತ ಹಾಗೂ ಲೇಖಕ ವಾದಿರಾಜ್, ವಿವಿಧತೆಯಲ್ಲಿ ಏಕತೆ ಹೊಂದಿರುವ ಭಾರತವನ್ನು ಏಕರೂಪದ ದೇಶವಾಗಿ ನೋಡಲು ಯಾರು ಬಯಸುವುದಿಲ್ಲ. ಅನೇಕ ಭಾಷೆ, ಆಚಾರ-ವಿಚಾರ, ಸಂಪ್ರದಾಯಗಳನ್ನು ಹೊಂದಿರುವ ದೇಶವನ್ನು ಒಂದು ರೂಪದಲ್ಲಿ ಕಾಣುಸುವುದು ಅಸಾಧ್ಯವೆಂದು ಡಾ.ಬಿ.ಆರ್. ಅಂಬೇಡ್ಕರ್ ಅವರೇ ಹೇಳಿದ್ದಾರೆ. ಆದರೆ, ವಿವಿಧತೆಯಲ್ಲೂ ಏಕತೆಯನ್ನು ಕಾಣುವುದು ಮುಖ್ಯ. ಆರ್‌ಎಸ್‌ಎಸ್ ಕಳೆದ ನೂರು ವರ್ಷಗಳಿಂದ ಹಿಂದುತ್ವದಡಿ ಕೆಲಸ ಮಾಡುತ್ತಿದೆ. ಅದು ತನ್ನ ಕಾರ್ಯಯೋಜನೆಯಲ್ಲಿ ಸಾಫಲ್ಯತೆ ಕಂಡಿದೆ ಎಂದರೆ ಸುಳ್ಳಾಗುತ್ತದೆ. ಆದರೆ, ಆ ನಿಟ್ಟಿನಲ್ಲಿ ಭಾರತವನ್ನು ಒಗ್ಗೂಡಿಸುವ ವಿಶ್ವಾಸ ಮೂಡಿಸಿದೆ ಎಂದರು.

1947ರ ಆ. 15ರಷ್ಟು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತೆಂದು ನಾವೆಲ್ಲರೂ ಭಾವಿಸಿದ್ದೇವೆ. ಆದರೆ ಪೋರ್ಚುಗಿಸರು ಗೋವಾದಲ್ಲಿ ಆಗಲು ಆಡಳಿತ ನಡೆಸುತ್ತಿದ್ದರು. ವಿದೇಶಿಗರಿಂದ ದೇಶವನ್ನು ರಕ್ಷಿಸಲು 1947ರ ಬಳಿಕ ಕೆಲಸಗಳು ನಡೆದವು. 540 ಪ್ರಾಂತ್ಯಗಳನ್ನು ಒಗ್ಗೂಡಿಸಿದ ಬಳಿಕ ಭಾರತವನ್ನು ರಾಜಪ್ರಭುತ್ವದಡಿ ಮುಂದುವರಿಸಬೇಕೋ ಅಥವಾ ಪ್ರಜಾಪ್ರಭುತ್ವದಡಿ ಮುನ್ನಡೆಸಬೇಕೋ ಎಂಬ ಪ್ರಶ್ನೆ ಹುಟ್ಟಿದಾಗ ದೇಶದ ನಾನಾ ಭಾಗದ 280ಕ್ಕೂ ಹೆಚ್ಚು ವಿದ್ವಾಂಸರು ಸತತ ಎರಡು ವರ್ಷಗಳ ಕಾಲ ಅಧ್ಯಯನದ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನ ರಚಿಸಿ ಪ್ರಜಾಪ್ರಭುತ್ವದಡಿ ದೇಶವನ್ನು ಕಟ್ಟಲು ಮುಂದಾದರು. 1949ರ ನ. 26ರಂದು ಸಂವಿಧಾನ ದೇಶಕ್ಕೆ ಸಿಕ್ಕಿತು. 1950ರ ಜ. 26ರಂದು ಅದನ್ನು ಲೋಕಸಭೆ ಅಂಗೀಕರಿಸಿತೆಂದರು.

### ಭಾರತ ಅತ್ಯಂತ ಶ್ರೀಮಂತ ರಾಷ್ಟ್ರ

ಭಾರತವನ್ನು ಕತ್ತಲ ದೇಶ, ಹಾವಾಡಿಗರ ದೇಶ, ಅನಕ್ಷರಸ್ಥರ ನಾಡು ಎಂದು ಹೀಗಳೆಯುತ್ತಿದ್ದರು. ಈ ದೇಶ ಅಷ್ಟೊಂದು ಬಡತನದಲ್ಲಿದ್ದಿದ್ದರೆ 800 ವರ್ಷಗಳ ಕಾಲ ವಿದೇಶಿಗರು ಏಕೆ ಆಳ್ವಿಕೆ ಮಾಡಿದರು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಭಾರತ ಜಗತ್ತಿನ ಅತ್ಯಧಿಕ ಶ್ರೀಮಂತ ರಾಷ್ಟ್ರವಾಗಿತ್ತು. ಕರಕುಶಲ ವಸ್ತುಗಳ ತಯಾರಿಕೆ, ವಾಸ್ತುಶಿಲ್ಪ, ಶಿಕ್ಷಣ, ವಿಜ್ಞಾನ, ಕಲೆ, ಸಾಹಿತ್ಯದಲ್ಲಿ ಭಾರತ ವಿಶ್ವಕ್ಕೆ ಮಾದರಿಯಾಗಿತ್ತು. ಅದೇ ರೀತಿ ಭಿನ್ನ ವಿಭಿನ್ನ ಜಾತಿ, ಆಚಾರಗಳು, ಸಂಪ್ರದಾಯಗಳಿದ್ದವು. ಅದೆಲ್ಲವನ್ನೂ ಒಗ್ಗೂಡಿಸುವುದು ಸವಾಲಿನ ಕೆಲಸವಾಗಿತ್ತು. ಅಂತಹ ಸಂದರ್ಭದಲ್ಲಿ ಆರ್‌ಎಸ್‌ಎಸ್ ತನ್ನದೇಯಾದ ಯೋಜನೆ ಮೂಲಕ ಅಸ್ತಿತ್ವ ತಾಳಿತು. ಹಿಂದುತ್ವದ ಹೆಸರಿನಲ್ಲಿ ಎಲ್ಲರನ್ನೂ ಒಳಗೊಳ್ಳುವ ಪ್ರಯತ್ನ ಮಾಡುತ್ತಿದೆ. ವಿವಿಧತೆಯಲ್ಲೇ ದೇಶವನ್ನು ಒಂದು ಮಾಡಬೇಕೆಂಬ ಉದ್ದೇಶದಿಂದ ಕೆಲಸ ಮಾಡುತ್ತಿದೆಯೆಂದರು.

ಹಿಂದುಗಳು ಎಂದರೆ ಎಲ್ಲರೂ ಒಳಗೊಳ್ಳುತ್ತಾರೆ. ಇಲ್ಲಿಯೇ ಹುಟ್ಟಿದ ಮುಸ್ಲಿಂ, ಕ್ರಿಶ್ಚಿಯನ್ನರು ಸಹ ಮೂಲತಃ ಹಿಂದುಗಳೇ ಆಗಿದ್ದಾರೆ. ಅವರ್‍ಯಾರು ಬೇರೆ ದೇಶದಿಂದ ಬಂದವರಲ್ಲ. ಅವರ ಪೂರ್ವಿಕರು ಭಾರತೀಯರೇ ಎಂಬ ಸತ್ಯವನ್ನು ಅರಿಯಬೇಕು. ಹಾಗಾಗಿ ಅವರನ್ನೂ ಒಳಗೊಂಡ ಸಮಾಜ ನಿರ್ಮಾಣಕ್ಕೆ ಆದ್ಯತೆ ನೀಡಬೇಕಿದೆ. ದೇಶವನ್ನು ಏಕಸೂತ್ರದಡಿ ಕೊಂಡೊಯ್ಯುವುದು ಸುಲಭ ಕೆಲಸವಲ್ಲ. ಎಲ್ಲರೂ ಒಂದು ಎಂಬ ಭಾವನೆಯಲ್ಲಿ ಸಮಾಜ ಸಾಗಬೇಕಿದೆಯೆಂದು ಅವರು ಪ್ರತಿಪಾದಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘು, ಆರ್‌ಎಸ್‌ಎಸ್ ಮುಖಂಡ ವಿಜಯಕುಮಾರ್ ನಾರ್ವೆ, ಶ್ರೀಮಠದ ಭಕ್ತ ಎ.ಹೆಚ್. ಆನಂದ್ ಮತ್ತಿತರರಿದ್ದರು.

## ಧರ್ಮ ರಕ್ಷಣೆ ಎಲ್ಲರ ಜವಾಬ್ದಾರಿ: ಶಂಭುನಾಥ ಶ್ರೀ

ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಆಶೀರ್ವಚನ ನೀಡಿ, ಧರ್ಮ ನಾಶವಾದರೆ ಅನರ್ಥಗಳು ಸಂಭವಿಸುತ್ತವೆ. ಆ ನಿಟ್ಟಿನಲ್ಲಿ ಎಚ್ಚರ ವಹಿಸಬೇಕು. ಇಲ್ಲಿ ಧರ್ಮ ಎಂದರೆ ಕೇವಲ ಪೂಜೆ-ಪಠಣ ಮಾಡುವುದಲ್ಲ. ಸತ್ಯ, ನೀತಿ, ಕರ್ತವ್ಯ, ಕರುಣೆ ಮತ್ತು ಆತ್ಮಶುದ್ಧಿ ಎಂಬ ಜೀವನ ಮೌಲ್ಯಗಳು ಎಂಬುದನ್ನು ಅರ್ಥ ಮಾಡಿಕೊಂಡು ಮುನ್ನಡೆಯಬೇಕಿದೆಯೆಂದರು. ಧರ್ಮ ಕ್ಷೀಣಿಸಿದಾಗ ವ್ಯಕ್ತಿಯಲ್ಲಿ ಸಂಯಮ ಕುಸಿಯುತ್ತದೆ, ಸ್ವಾರ್ಥವೇ ಪ್ರಧಾನವಾಗುತ್ತದೆ. ಕರ್ತವ್ಯಕ್ಕಿಂತ ಅಧಿಕಾರ ದೊಡ್ಡದಾಗುತ್ತದೆ. ಆದ್ದರಿಂದ ಸಮಾಜದಲ್ಲಿ ಅಶಾಂತಿ, ಅಕ್ರಮ, ಅನ್ಯಾಯ ಹೆಚ್ಚಾಗುತ್ತವೆಂದರು.

ಧರ್ಮವಿಲ್ಲದ ಶಿಕ್ಷಣ ಬುದ್ಧಿ ಕೊಡಬಹುದು, ಆದರೆ ವಿವೇಕ ಕೊಡುವುದಿಲ್ಲ. ಧರ್ಮವಿಲ್ಲದ ಅಭಿವೃದ್ಧಿ ಸೌಲಭ್ಯ ಕರುಣಿಸಬಹುದು ಸಂತೋಷವನ್ನಲ್ಲ. ನಮ್ಮ ಧರ್ಮ ಮಾನವನನ್ನು ಮಾನವನಾಗಿರಿಸಲು ಕಲಿಸುತ್ತದೆ, ಬಲವಂತಕ್ಕಿಂತ ಬುದ್ಧಿ, ದ್ವೇಷಕ್ಕಿಂತ ದಯೆ, ಅಹಂಕಾರಕ್ಕಿಂತ ಆತ್ಮಜ್ಞಾನವನ್ನು ಧರ್ಮ ಕಲಿಸುತ್ತದೆ. ಧರ್ಮ ರಕ್ಷಣೆ ಎಲ್ಲರ ಜವಾಬ್ದಾರಿ ಎಂದರು.

## ಬಿಳಿಸುಳಿ ರೋಗದ ಸಮಸ್ಯೆಗೆ ಪರಿಹಾರ ಕಲ್ಪಿಸಲು ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಮೆಕ್ಕೆಜೋಳ ಬೆಳೆಗೆ ಕಳೆದ ವರ್ಷ ಬಿಳಿಸುಳಿ ರೋಗ ಕಾಣಿಸಿಕೊಂಡು ರೈತರಿಗೆ ಆರ್ಥಿಕ ನಷ್ಟವಾಗಿದ್ದು, ಈ ಬಾರಿ ಉತ್ತಮ ಮೆಕ್ಕಜೋಳ ಬಿತ್ತನೆ ಬೀಜವನ್ನು ಸರಬರಾಜು ಮಾಡುವಂತೆ ಹಾಗೂ ಬಿಳಿಸುಳಿ ರೋಗದ ಸಮಸ್ಯೆಗೆ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಇಂದು ಕೃಷಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಹೈಬ್ರಿಡ್ ಮುಸುಕಿನ ಜೋಳ ಬಿತ್ತನೆ ಬೀಜ ಸರಬರಾಜು ಹಾಗೂ ಬಿಳಿಸುಳಿ ರೋಗ ನಿಯಂತ್ರಣ ಹಾಗೂ ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸಿ ಸಮಿತಿಯು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಕುರಿತು ರೈತರು, ಉತ್ಪಾದಕ, ಸರಬರಾಜು ವಿತರಕರು ಬಿತ್ತನೆ ಬೀಜ ಮಾರಾಟಗಾರಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2025-26ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಬಿತ್ತನೆಯಾಗಿದ್ದ ಮೆಕ್ಕೆ ಜೋಳ ಬೆಳೆಗೆ ಬಿಳಸುಳಿ ರೋಗ ಕಾಣಿಸಿಕೊಂಡು ರೈತರಿಗೆ ಉಂಟಾದ ಆರ್ಥಿಕ ನಷ್ಟದ ಹಿನ್ನೆಲೆಯಲ್ಲಿ ರೋಗವನು ತಡೆಯುವ ಪ್ರಮಾಣ ತಡೆಯುವ ನಿಟ್ಟಿನಲ್ಲಿ ಕೃಷಿ ವಿಜ್ಞಾನಿಗಳು ಮುಂಜಾಗ್ರತೆ ವಹಿಸಿ ಮಾಹಿತಿ ನೀಡಬೇಕು ಎಂದ ಅವರು ಜಿಲ್ಲೆ ಹಿಂದೆ ಆಲೂಗೆಡ್ಡೆ ಬೆಳೆಗೆ ಪ್ರಸಿದ್ಧಿಯನ್ನು ಪಡೆದಿತ್ತು, ಆದರೆ ಇಂದು ಹೈನುಗಾರಿಕೆಯಲ್ಲಿ ಪ್ರಸಿದ್ಧಿಯನ್ನು ಪಡೆಯುತ್ತಿದೆ. ಹೈನುಗಾರಿಕೆಗೆ ಜಾನುವಾರುಗಳ ಮೇವಿಗೆ ಮೆಕ್ಕೆಜೋಳವನ್ನು ಬಳಸುತ್ತಿದ್ದು, ಮುಸುಕಿನ ಜೋಳದಲ್ಲಿ ಬಿಳಿಸುಳಿ ರೋಗ ತಡೆಗಟ್ಟಲು ಬೀಜಗಳ ಬಳಕೆ, ರಾಸಾಯನಿಕ ಬಳಕೆಯ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದರು.

ಕಳೆದ ಬಾರಿ ಜಿಲ್ಲೆಗೆ ಭೇಟಿ ನೀಡಿದ ಕೃಷಿ ವಿಜ್ಞಾನಿಗಳ ತಂಡ ಬಿಳಿಸುಳಿ ರೋಗವು ಮಣ್ಣಿನಿಂದ ಹೆಚ್ಚಾಗಿದೆ ಎಂದು ವರದಿ ಬಂದಿದೆ, ಬೆಳೆಯನ್ನು ಬೆಳದ ಭೂಮಿಯಲ್ಲಿಯೇ ಪದೇ ಪದೇ ಬೆಳೆಯುತ್ತಿರುವುದರಿಂದ ರೋಗವು ಕಂಡು ಬರುತ್ತಿದೆ ಎಂದು ತಂಡ ವರದಿ ನೀಡಿದೆ ಎಂದರು

ಜಂಟಿ ಕೃಷಿ ನಿರ್ದೇಶಕ ರಮೇಶ್, ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಸಹ ಸಂಶೋಧನಾ ನಿರ್ದೇಶಕ ಡಾ. ಬಸವರಾಜು, ಕೃಷಿಕ ಸಮಾಜ ಅಧ್ಯಕ್ಷರಾದ ರಂಗಸ್ವಾಮಿ, ರೈತರು, ಮೆಕ್ಕೆಜೋಳ ಬಿತ್ತನೆ ಬೀಜ ಮಾರಾಟಗಾರರು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ಇದ್ದರು.

# ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಸಂಘದ ಪರ ತೀರ್ಪು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ 2022ರ ಕಾರ್ಯಕಾರಿ ಮಂಡಳಿ ಚುನಾವಣೆ ರದ್ದುಪಡಿಸುವ ಉದ್ದೇಶದಿಂದ ಕೆಲವರು ಮಾಡಿದ್ದ ಆರೋಪಗಳು ಸುಳ್ಳೆಂದು ಜಿಲ್ಲಾ ನ್ಯಾಯಾಲಯ ಆದೇಶ ನೀಡಿದ್ದು ನ್ಯಾಯಕ್ಕೆ ಜಯ ಸಿಕ್ಕಿದೆಯೆಂದು ಸಂಘದ ಅಧ್ಯಕ್ಷೆ ಡಾ. ಭಾರತಿ ರಾಜಶೇಖರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂಘದಲ್ಲಿ 16 ಸದಸ್ಯರು ಇದ್ದಾರೆ. 2022ರಲ್ಲಿ ಕಾರ್ಯಕಾರಿ ಮಂಡಳಿ ಚುನಾವಣೆ ರದ್ದುಗೊಳಿಸುವ ಉದ್ದೇಶದಿಂದ ಕೆಲ ಸದಸ್ಯರು ಸುಳ್ಳು ಆರೋಪ ಮಾಡಿದ್ದರು. ಆಗಿನ ಅಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಪೂರ್ವ ಕಾರ್ಯದರ್ಶಿ ಹಾಗು ಉಪನಿಬಂಧಕರ ವಿರುದ್ಧ ಸದಸ್ಯರ ಪಟ್ಟಿಯಲ್ಲಿ ಅಕ್ರಮ ನಡೆದಿದೆ ಹಾಗು ಇತರ ಅನೇಕ ಆರೋಪ ಮಾಡಿದ್ದರು. ಈ ಸಂಬಂಧ ಹಾಸನದ ಆರನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಆ ನಂತರವೂ ಚುನಾವಣೆ ತಡೆಹಿಡಿಯಲು ಕೊನೆಯ ಕ್ಷಣದವರೆಗೂ ಪ್ರಯತ್ನಿಸಿದರು ಎಂದರು.

ನಮ್ಮ ವಿರುದ್ಧ ಮಾಡಿದ್ದ ಆರೋಪಗಳನ್ನು ನ್ಯಾಯಾಲಯದ ವಿಚಾರಣೆ ಸಂದರ್ಭದಲ್ಲಿ ಸಾಬೀತುಪಡಿಸಲು ದಾವೆದಾರರು ವಿಫಲರಾಗಿದ್ದಾರೆ. ಸಂಘ ಹಾಗೂ ಕಾರ್ಯಕಾರಿ ಮಂಡಳಿ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ ಸಂಘದ ಗೌರವಕ್ಕೆ ಧಕ್ಕೆ ತಂದು ಕಪ್ಪು ಮಸಿ ಬಳಿಯಲು ಯತ್ನಿಸಿದ್ದವರು ಈಗ ತಾವು ಮಾಡಿದ್ದ ಆರೋಪಗಳನ್ನು ಲಿಖಿತವಾಗಿ ಹಿಂಪಡೆದಿದ್ದಾರೆ. ಅದರಿಂದ ಅವರು ಮಾಡಿದ್ದ ಅಕ್ರಮ ಆರೋಪ ಸುಳ್ಳು ಎಂಬುದು ಗೊತ್ತಾಗಿದೆಯೆಂದರು.

ಸಂಘವನ್ನು ಶುದ್ಧ ಹಸ್ತದಿಂದ, ನ್ಯಾಯಬದ್ಧವಾಗಿ ಹಾಗೂ ಪಾರದರ್ಶಕವಾಗಿ ನಡೆಸಲಾಗಿದೆ ಎಂಬುದನ್ನು ಸಮಾಜಕ್ಕೆ ತಿಳಿಸಬೇಕಿದೆ. ಸಂಘದ ಬೈಲಾ ಪ್ರಕಾರ ಈಗಿನ ಕಾರ್ಯಕಾರಿ ಮಂಡಳಿಯ ಅವಧಿ ಪೂರ್ಣಗೊಂಡಿದ್ದು, ಮುಂದಿನ ಚುನಾವಣೆಯನ್ನು 2022ರ ಚುನಾವಣೆಯಲ್ಲಿ ಮಾನ್ಯವಾಗಿದ್ದ ಮತದಾರರ ಪಟ್ಟಿಯನ್ನೇ ಪರಿಗಣಿಸಿ ನಡೆಸಲಾಗುವುದೆಂದು ಸ್ಪಷ್ಟಪಡಿಸಿದರು. ಹೊಸದಾಗಿ ಸೇರ್ಪಡೆಯಾದ ಸದಸ್ಯರಿಗೆ ಈ ಬಾರಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. ಆದರೆ ಅವರ ಹೆಸರುಗಳನ್ನು ಮಾಹಿತಿ ಉದ್ದೇಶಕ್ಕಾಗಿ ನಿಬಂಧಕರ ಕಚೇರಿಗೆ ಸಲ್ಲಿಸಲಾಗುವುದೆಂದರು.

ಸಂಘದ ನಿಕಟಪೂರ್ವ ಕಾರ್ಯದರ್ಶಿ ನರ್ಮದಾ, ಉಪಾಧ್ಯಕ್ಷೆ ಮಂಗಳ ಚಂದ್ರೇಗೌಡ, ವಕೀಲರಾದ ಮೂರ್ತಿ, ಮಂಜುಳಾ ಇದ್ದರು.

# ರೈಲು ಪ್ರಯಾಣಿಕರೊಂದಿಗೆ ಸ್ನೇಹದಿಂದಿರಲು ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕರ್ತವ್ಯ ಪಾಲನೆ ಜೊತೆಗೆ ರೈಲು ಪ್ರಯಾಣಿಕರೊಂದಿಗೆ ಸ್ನೇಹಪರತೆಯಿಂದ ವರ್ತಿಸುವು ದು ರೈಲ್ವೆ ಪೊಲೀಸರ ಹೊಣೆಗಾರಿಕೆ ಯೆಂದು ರೈಲ್ವೆ ವಿಭಾಗದ ಡಿಐಜಿ ಜೆ.ಕೆ.ರಶ್ಮಿ ಸಲಹೆ ನೀಡಿದರು.

ಅರಸೀಕೆರೆ ರೈಲ್ವೆ ನಿಲ್ದಾಣಕ್ಕೆ ಸೋಮವಾರ ಭೇಟಿ ನೀಡಿದ್ದ ಅವರು ಅಲ್ಲಿನ ವ್ಯವಸ್ಥೆ ಪರಿಶೀಲಿಸಿ ರೈಲ್ವೆ ಪೊಲೀರು ಹಾಗು ಪ್ರಯಾಣಿಕರೊಂದಿಗೆ ಸಮಾಲೋಚನೆ ನಡೆಸಿದರು.

ರೈಲು ಪ್ರಯಾಣಿಕರಿಗೆ ಭದ್ರತೆ ನೀಡಲು ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ರೈಲ್ವೆ ಪೊಲೀಸರು ಹಗಲಿರುಳು ಶ್ರಮಿಸುತ್ತಿದ್ದಾರೆ. ಆದರೂ ಕೆಲವು ಸಂದರ್ಭಗಳಲ್ಲಿ ಪ್ರಯಾಣಿಕರನ್ನು ವಂಚಿಸಿ ಅವರ ಬಳಿ ಇರುವ ಹಣ ಮತ್ತು ಬೆಲೆ ಬಾಳುವ ವಸ್ತುಗಳನ್ನು ದೋಚುವ ಪ್ರಕರಣಗಳು ಮರುಕಳಿಸುತ್ತಿವೆ. ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಹ ರೈಲ್ವೆ ಪೊಲೀಸರು ಅಗತ್ಯ ಕ್ರಮ ಕೈಗೊಳ್ಳಬೇಕೆಂದರು.

ಪ್ರಯಾಣಿಕರು ಸಹ ತಾವು ಪ್ರಯಾಣಿಸುವ ಸಂದರ್ಭದಲ್ಲಿ ರೈಲು ಹಾಗು ರೈಲ್ವೆ ನಿಲ್ದಾಣದ ಆವರಣದಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದರೆ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರು.

## ತಾಯ್ನುಡಿ ಇಲ್ಲದ ಶಿಕ್ಷಣ, ಆತ್ಮವಿಲ್ಲದ ದೇಹದಂತೆ

**ಪು.ತಿ. ನರಸಿಂಹಾಚಾರ್-ಸಾಹಿತ್ಯ ಚಿಂತಕ**



ವಿವರಣೆ: ಈ ನುಡಿಯ ಮೂಲಕ ಪು.ತಿ. ನರಸಿಂಹಾಚಾರ್ ಅವರು ತಾಯ್ನುಡಿಯ ಮಹತ್ವವನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸಿದ್ದಾರೆ. ತಾಯ್ನುಡಿ ಯಾವುದೇ (ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ, ಸಂಸ್ಕೃತ ) ಇಲ್ಲದೆ ದೊರೆಯುವ ಶಿಕ್ಷಣ ಕೇವಲ ಮಾಹಿತಿಯ ಸಂಗ್ರಹವಾಗುತ್ತದೆ. ಅದು ವ್ಯಕ್ತಿಯ ಮನಸ್ಸು, ಭಾವನೆ ಮತ್ತು ಸಂಸ್ಕೃತಿಯನ್ನು ಸ್ಪರ್ಶಿಸುವುದಿಲ್ಲ. ಆತ್ಮವಿಲ್ಲದ ದೇಹ ಹೇಗೆ ಜೀವಂತವಾಗಿರಲಾರದು, ಅದೇ ರೀತಿಯಲ್ಲಿ ತಾಯ್ನುಡಿಯಿಲ್ಲದ ಶಿಕ್ಷಣವೂ ವ್ಯಕ್ತಿತ್ವವನ್ನು ಪೂರ್ಣವಾಗಿ ರೂಪಿಸಲಾರದು. ತಾಯ್ನುಡಿ ಆಲೋಚನೆಗೆ ಆಧಾರ, ಅಭಿವ್ಯಕ್ತಿಗೆ ಶಕ್ತಿ ಮತ್ತು ಆತ್ಮವಿಶ್ವಾಸಕ್ಕೆ ನೆಲೆ. ಆದ್ದರಿಂದ ಸಾರ್ಥಕ, ಜೀವಂತ ಹಾಗೂ ಮೌಲ್ಯಾಧಾರಿತ ಶಿಕ್ಷಣಕ್ಕಾಗಿ ತಾಯ್ನುಡಿ ಅನಿವಾರ್ಯವಾಗಿದೆ.

**- ಅಂತೋಣಿ ಮುತ್ತು ವಿ, ಶಿಕ್ಷಕರು 7259675543**

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-04

**1789:** ಅಮೆರಿಕದ ಮೊದಲ ಅಧ್ಯಕ್ಷರಾಗಿ ಜಾರ್ಜ್ ವಾಷಿಂಗ್ಟನ್ ಆಯ್ಕೆಯಾದರು.

**1924:** ಬ್ರಿಟನ್‌ನಲ್ಲಿ ಮೊದಲ ಬಾರಿಗೆ ಬಿಬಿಸಿ ರೇಡಿಯೋ ಪ್ರಸಾರ ಆರಂಭವಾಯಿತು.

**1944:** ದ್ವಿತೀಯ ಮಹಾಯುದ್ಧದ ವೇಳೆ ಶ್ರೀಲಂಕಾ (ಸಿಲೋನ್) ಮೇಲೆ ಜಪಾನ್ ವಾಯುದಾಳಿ ನಡೆಸಿತು.

**1966:** ಜಪಾನ್‌ನ ಮೊದಲ ಉಪಗ್ರಹ -1 ಉಡಾವಣೆ

**2004:** ಫೇಸ್‌ಬುಕ್ ಸ್ಥಾಪನೆ ಸಾಮಾಜಿಕ ಜಾಲತಾಣಗಳ ಯುಗಕ್ಕೆ ಹೊಸ ಅಧ್ಯಾಯ.

**ಮರಣ**

**1959:** ಜಾರ್ಜ್ ಅಲ್ಬರ್ಟ್ ಸ್ಮಿತ್, ಬ್ರಿಟಿಷ್ ಚಲನಚಿತ್ರ ನಿರ್ದೇಶಕ

# ಕ್ರಷರ್‌ಗೆ ಸ್ಥಳೀಯರಿಂದ ವಿನಾಕಾರಣ ತೊಂದರೆ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಕಾನೂನು ಪ್ರಕಾರ ಅಧಿಕಾರಿಗಳಿಂದ ಅನುಮತಿ ಪಡೆದಿದ್ದರೂ ಕ್ರಷರ್ ನಡೆಸಲು ಸ್ಥಳೀಯರು ಅಡ್ಡಿಪಡಿಸುತ್ತಿದ್ದಾರೆಂದು ಕ್ರಷರ್ ಮಾಲೀಕ ರಾಜೇಶ್ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅರಕಲಗೂಡು ತಾಲ್ಲೂಕು ಅರಸೀಕೆರೆ ಕಟ್ಟೆ ಕಾವಲು ಗ್ರಾಮದ ಸ.ನಂ.116ರಲ್ಲಿ ಕ್ರಷರ್ ಘಟಕ ಸ್ಥಾಪನೆಗೆ ಅನುಮತಿ ಸಿಕ್ಕಿದ್ದರೂ ವಿನಾಕಾರಣ ತೊಂದರೆ ನೀಡಲಾಗುತ್ತಿದೆ.

5 ಎಕರೆ ಪ್ರದೇಶದಲ್ಲಿ ಕ್ರಷರ್ ಘಟಕ ಸ್ಥಾಪಿಸಲು 2017ರಲ್ಲೇ ಮಲ್ಲಯ್ಯ ಎಂಬುವರಿಗೆ ಪಾರಂ-ಸಿಯಲ್ಲಿ ಪರವಾನಗಿ ನೀಡಲಾಗಿದೆ. ಅದಕ್ಕೆ ರಕ್ಷಣಾ ವಲಯ ಸಮಿತಿಯೂ ಅನುಮತಿ ನೀಡಿದೆ. ಕೋಟ್ಯಂತರ ರೂಪಾಯಿ ಬಂಡವಾಳ ಹೂಡಿ ಪರಿಸರಕ್ಕೆ ಹಾನಿಯಾಗದಂತೆ, ಹೆಚ್ಚು ಧೂಳು ಹೊರ ಹೊಮ್ಮದಂತೆ ಅತ್ಯಾಧುನಿಕ ಯಂತ್ರ ಅಳವಡಿಸಲಾಗಿದೆ ಎಂದರು.

ಆದರೆ ಉದ್ಯಮ ವೈಷಮ್ಯದಿಂದ ಬೆಮ್ಮತ್ತಿ ಗ್ರಾಮದ ಸುರೇಶ್ ಎಂಬುವವರು ಸ್ಥಳೀಯರನ್ನು ಎತ್ತಿಕಟ್ಟಿ ಕ್ರಷರ್ ಡೀಮ್ಡ್ ವ್ಯಾಪ್ತಿಯಲ್ಲಿದೆ. ಹೆದ್ದಾರಿ, ಶಾಲೆ ದೇವಾಲಯಕ್ಕೆ ಹತ್ತಿರವಾಗಿದೆ ಎಂದು ಸುಳ್ಳು ಹೇಳಿ ನ್ಯಾಯಾಲಯ ಸೇರಿ ಸಂಬಂಧಪಟ್ಟ ಇಲಾಖೆಗಳಿಗೆ ದೂರು ನೀಡಿದರು. ಅದಕ್ಕೆ ಕೋರ್ಟ್ ತಾತ್ಕಾಲಿಕ ತಡೆ ನೀಡಿತು. ಬಳಿಕ ಕಂದಾಯ, ಭೂಮಾಪನಾ, ಗಣಿ ಮತ್ತು ಭೂ ವಿಜ್ಞಾನ ಹಾಗು ಅರಣ್ಯ ಇಲಾಖೆ ಅಧಿಕಾರಿಗಳು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಜಂಟಿ ಸ್ಥಳ ಪರಿಶೀಲನೆ ನಡೆಸಿದರು. ಉದ್ದೇಶಿತ ಜಾಗ ಅರಣ್ಯ ವ್ಯಾಪ್ತಿಗೆ ಒಳಪಟ್ಟಿಲ್ಲ, ಅದು ಸಂಪೂರ್ಣ ಬಿ ಖರಾಬು ಜಮೀನಾದ್ದರಿಂದ ಎಡಿಎಲ್‌ಆರ್ ದಾಖಲೆ ಅನ್ವಯ ನಕಾಶೆಯಲ್ಲಿ ಬೆಟ್ಟಗುಡ್ಡಗಳೆಂದು ತೋರಿಸಿದ್ದಾರೆ ಎಂದರು.

ಕ್ರಷರ್ ಜಾಗವು ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಇತರೆ ಗ್ರಾಮ ರಸ್ತೆ, ಕಂದಾಯ ಗ್ರಾಮ, ದೇವಾಲಯ, ಶಾಲೆ, ನೀರಿನ ಮೂಲ ಎಲ್ಲದರಲ್ಲೂ ನಿಯಮಾವಳಿಗಿಂತ ಸಾಕಷ್ಟು ದೂರ ಇದೆ.

ಈ ನಡುವೆ ಹೈಕೋರ್ಟ್ ಸಹ ನನ್ನ ಎದುರುದಾರರು ಸಲ್ಲಿಸಿದ್ದ ತಕರಾರು ಅರ್ಜಿ ರದ್ದು ಮಾಡಿ ಕ್ರಷರ್ ನಡೆಸಲು ಅನುಮತಿ ನೀಡಿದೆ ಎಂದರು.

ಆದರೂ ನ್ಯಾಯ ಸಮ್ಮತವಾಗಿ ಕ್ರಷರ್ ನಡೆಸಲು ಪದೇ ಪದೇ ತೊಂದರೆ ನೀಡಲಾಗುತ್ತಿದೆ. ಈಗಲೂ ಸಂಬಂಧಪಟ್ಟವರು ಜಂಟಿ ಸಮೀಕ್ಷೆ ಮಾಡಲಿ, ನನ್ನದೇನಾದರೂ ತಪ್ಪಾಗಿದ್ದರೆ ಜೈಲಿಗೆ ಹಾಕಲಿ, ನಾನು ಯಾವುದೇ ತಪ್ಪು ಮಾಡಿಲ್ಲ, ನಿಯಮ ಉಲ್ಲಂಘಿಸಿಲ್ಲ, ಶಾಲಾ ಮಕ್ಕಳಿಗೂ ತೊಂದರೆ ನೀಡಿಲ್ಲವೆಂದು ಸ್ಪಷ್ಟಪಡಿಸಿದರು.

ದಲಿತ ಮುಖಂಡ ಹೆಚ್. ಕೆ.ಸಂದೇಶ್, ಉಮೇಶ್, ಕ್ರಷರ್ ಮಾಲೀಕರಾದ ಮಲ್ಲಯ್ಯ ಇದ್ದರು.

# ವಿದ್ಯಾರ್ಥಿಗಳು ಅವಕಾಶಗಳ ಸದುಪಯೋಗ ಪಡೆಯಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ವಿದ್ಯಾರ್ಥಿಗಳು ಜೀವನದಲ್ಲಿ ಸಿಗುವ ಅವಕಾಶಗಳ ಸದ್ಬಳಕೆ ಮಾಡಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳಬೇಕೆಂದು ರೋಟರಿ ಕ್ಲಬ್ ಜಿಲ್ಲಾ ಗವರ್ನರ್ ಪಾಲಾಕ್ಷ ಅವರು ಹೇಳಿದರು. ನಗರದ ಗುಡ್ ಸಿಟಿಜನ್ ಕಾಲೇಜಿನಲ್ಲಿ ರೋಟರಿ ಕ್ಲಬ್ ಕ್ವಾಂಟಾ ವತಿಯಿಂದ ಹಮ್ಮಿಕೊಂಡಿದ್ದ ಇಂಟ್ರಾಕ್ಟ್ ಕ್ಲಬ್ ಮತ್ತು ರೋಟ್ರಾಕ್ಟ್ ಕ್ಲಬ್ ಸ್ಥಾಪನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹದಿಹರೆಯದ ವಯಸ್ಸಿನಲ್ಲಿ ಮಕ್ಕಳು ದಾರಿ ತಪ್ಪುವ ಸಾಧ್ಯತೆ ಹೆಚ್ಚಿರುತ್ತದೆ. ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾದುದು. ಯಾವ ಕಾರಣಕ್ಕೂ ಸಮಯ ವ್ಯರ್ಥ ಮಾಡದೆ ವ್ಯಾಸಂಗದಲ್ಲಿ ತೊಡಗಬೇಕು ಎಂದರು. ಗುಡ್ ಸಿಟಿಜನ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೇಮಂತ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಕ್ಲಬ್ ಅಧ್ಯಕ್ಷೆ ಸನ್ಮತಿ ಪ್ರಸಾದ್, ಶಿವಕುಮಾರ್ ನಾರಾಯಣಸ್ವಾಮಿ, ಕಾಂತರಾಜು, ಸಂಜಯ್ ಶ್ರೀನಿವಾಸ್ ಮತ್ತಿತರರಿದ್ದರು.

# ನೆಲದವ್ವನಿಗೆ ಹಸಿರು ಕೌದಿ ಕೃತಿ ಬಿಡುಗಡೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಇಂದಿನ ಸಮಾಜಕ್ಕೆ ಅಹಿಂದ ಸಮಾವೇಶಗಳೂ ಬೇಕಿಲ್ಲ, ಹಿಂದೂ ಸಮಾವೇಶಗಳೂ ಬೇಕಿಲ್ಲ. ಜನರನ್ನು ವಿಭಜಿಸುವ ಯಾವ ಸಮಾವೇಶಗಳ ಅಗತ್ಯಮೂ ಇಲ್ಲ. ಆದರೆ ಈ ಭೂಮಿಯನ್ನು ಉಳಿಸುವ, ಕಾಪಾಡುವ ಮತ್ತು ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ಒಪ್ಪಿಸುವ ಚಿಂತನೆಯ ಸಮಾವೇಶಗಳು ಮಾತ್ರ ಜಗತ್ತಿನಾದ್ಯಂತ ಹೆಚ್ಚಾಗಿ ನಡೆಯಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್. ಮಲ್ಲೇಶಗೌಡ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜಿಲ್ಲಾ ಪಿಯು ಕಾಲೇಜುಗಳ ಕನ್ನಡ ಉಪನ್ಯಾಸಕರ ಹಾಗೂ ಪ್ರಾಂಶುಪಾಲರ ವೇದಿಕೆ ಮತ್ತು ಹಾಸನ ಜಿಲ್ಲಾ ಕಸಾಪ ಇವರ ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಆನೆಲದವ್ವನಿಗೆ ಹಸಿರು ಕೌದಿ (ಕೃಷಿ, ಅರಣ್ಯ, ರೈತರ ಆಶಾಕಿರಣ)ಟಿ ಎಂಬ ಮಹತ್ವದ ಕೃತಿ ಬಿಡುಗಡೆ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಇಬ್ಬರು ಲೇಖಕರು ಅಪಾರ ಶ್ರದ್ಧೆಯಿಂದ, ಆಳವಾದ ಅಧ್ಯಯನದಿಂದ ಮತ್ತು ಬದುಕಿನ ಅನುಭವದಿಂದ ಈ ಕೃತಿಯನ್ನು ರೂಪಿಸಿದ್ದಾರೆ. ಪ್ರಖ್ಯಾತ ಸಾಹಿತಿ ಹಾಗೂ ಪರಿಸರ ಚಿಂತಕರಾದ ಡಾ. ಕೆ.ಎಸ್. ಹರಶಿವಮೂರ್ತಿ ತಮ್ಮ ಸಂಪೂರ್ಣ ಸಾಹಿತ್ಯಿಕ ಅಧ್ಯಯನವನ್ನು ಈ ಕೃತಿಯಲ್ಲಿ ಧಾರೆ ಎರೆದಿದ್ದಾರೆ. ಅದ್ಭುತ ವಾಕ್ಯಗಳು, ತತ್ವಬದ್ಧ ವಿಚಾರಗಳು ಈ ಕೃತಿಯಲ್ಲಿ ಹರಿದು ಬರುತ್ತವೆ; ಅದೇ ರೀತಿ ಸಾಹಿತಿ ಹಾಗೂ ನಿವೃತ್ತ ಉನ್ನತ ಅರಣ್ಯಾಧಿಕಾರಿ ಹೆಚ್.ಜಿ. ಶಿವಾನಂದಮೂರ್ತಿ ಅವರು ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಯಲ್ಲಿ ಸಲ್ಲಿಸಿದ ದಶಕಗಳ ಸೇವಾ ಅನುಭವವನ್ನು ಇಲ್ಲಿ ಸಮೃದ್ಧವಾಗಿ ಹಂಚಿಕೊಂಡಿದ್ದಾರೆ ಎಂದು ಬಣ್ಣಿಸಿದರು.

ಅರಣ್ಯ ಮತ್ತು ಕೃಷಿ ಇಲಾಖೆಗಳ ರಾಷ್ಟ್ರೀಯ ಮಟ್ಟದ ಅಂಕಿ-ಅಂಶಗಳನ್ನು ಬಳಸಿ, ಕೃಷಿ, ಅರಣ್ಯ, ರೈತರ ಬದುಕಿನ ನಡುವಿನ ಆಳವಾದ ಸಂಬಂಧವನ್ನು ಲೇಖಕರು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ. ಆನೆಲದವ್ವಟಿ ಎಂಬ ಪದವೇ ಭಾವನಾತ್ಮಕವಾಗಿದ್ದು, ಆಹಸಿರು ಕೌದಿಟಿ ಎಂಬ ಶೀರ್ಷಿಕೆ ಭೂಮಿಗೆ ನಾವು ಕೊಡಬೇಕಾದ ರಕ್ಷಣೆಯ ಸಂಕೇತವಾಗಿದೆ. ನೆಲಕ್ಕೆ ಹೊದಿಸಬೇಕಾದದ್ದು ಹಸಿರು ಕೌದಿಯೇ ಹೊರತು ಕಾಂಕ್ರಿಟ್ ಅಲ್ಲ ಎಂಬ ಸಂದೇಶ ಇದರಲ್ಲಿ ಅಡಗಿದೆ ಎಂದು ಹೇಳಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248